

ಉಲ್ಲಾಸದ ಆ ಕ್ಷಣ...

‘ಅದು ಸಾಧ್ಯವಾಗಬೇಕಾದರೆ ನೀವು ಆ ನಟ ಮಾಡುತ್ತಿರುವುದನ್ನು ನಿಮ್ಮೊಳಗೆ ಎನಾಕ್ಟ್ ಮಾಡಬೇಕು. ಅವರೊಳಗೆ ಪ್ರವೇಶಿಸಬೇಕು. ಅವರು ಮಾತನಾಡುವ ಶೈಲಿ, ಅವರು ಪದಗಳ ಮೂಲಕ ಹೇಗೆ ತಮ್ಮ ಭಾವವನ್ನು ಅಭಿವ್ಯಕ್ತಿಸುತ್ತಾರೆ, ಇವುಗಳನ್ನು ಸದಾ ಗಮನಿಸಿ, ಅಂತರ್ಗತಗೊಳಿಸಿಕೊಳ್ಳಬೇಕು. ಇವೆಲ್ಲವೂ ಹಾಡಿಗೆ, ಸಂಗೀತಕ್ಕೆ, ಲಯಕ್ಕೆ ಸ್ವಲ್ಪವೂ ತೊಂದರೆಯಾಗದಂತೆ ಸಹಜವಾಗಿ ಸೇರಿಕೊಳ್ಳಬೇಕು. ನಾವು ಹಾಡುವಾಗ ಅದಕ್ಕೆ ನಮ್ಮ ಮನೋಧರ್ಮವನ್ನು, ಕಲ್ಪನೆಯನ್ನು ಸೇರಿಸಿ ವಿಸ್ತರಿಸಬೇಕು. ಆದರೆ ಮೂಲ ದೇವರನ್ನು ವಿರೂಪಗೊಳಿಸಬಾರದು. ಅದು ಇನ್ನೂ ಚೆನ್ನಾಗಿ ಕಾಣುವಂತೆ ಮಾಡಬೇಕು. ಅದಕ್ಕೆ ಎಂ.ಎಸ್. ವಿಶ್ವನಾಥನ್ ಸರ್ ನನ್ನನ್ನು ಬ್ಲಾಟಿಂಗ್ ಪೇಪರ್ ಬಾಲು ಅಂತ ಕರೆಯುತ್ತಿದ್ದರು. ಇದು ಮಿಮಿಕ್ರಿಯಲ್ಲ. ಹಾಗಾದಲ್ಲಿ ಅದು ತುಂಬಾ ಅಸಹ್ಯವಾಗಿರುತ್ತದೆ. ಕಾಮೆಡಿ, ಕ್ಯಾರಿಕೇಚರ್ ಆಗಿಬಿಡುತ್ತದೆ.’

ಹಿನ್ನೆಲೆಗಾಯನವನ್ನು ಸಂಗೀತ ನಿರ್ದೇಶಕನ ಕನಸಿಗೆ ತಕ್ಕಂತೆ ಹಾಡಬೇಕು. ಆ ಚೌಕಟ್ಟಿನಲ್ಲೇ ತಮ್ಮ ಸ್ವಂತಿಕೆಯನ್ನೂ ಸೇರಿಸಿ ಬೆಳೆಸಬೇಕು. ಅದು ಸುಲಭದ ಮಾತಲ್ಲ. ನೂರಾರು ವಿಭಿನ್ನ ಸಂಗೀತ ನಿರ್ದೇಶಕರ ಕನಸನ್ನು ಸಾಕಾರಗೊಳಿಸುವುದು ಸುಲಭದ ಮಾತಲ್ಲ. ಅದು ಎಸ್‌ಪಿಬಿಗೆ ಸಾಧ್ಯವಾಗಿತ್ತು. ಹಾಗಾಗಿಯೇ ಅವರಿಗೆ ಹಲವು ದಶಕಗಳು ದಿನವಿಡೀ ದುಡಿಯುತ್ತಿದ್ದರೂ ಜೀವಂತವಾಗಿ, ಸೃಜನಶೀಲವಾಗಿ ಇರೋದಕ್ಕೆ ಸಾಧ್ಯವಾಯಿತು. ನಿಜವಾಗಿ ಹಿನ್ನೆಲೆ ಗಾಯನ ಅಂದರೇನು, ಹಿನ್ನೆಲೆ ಗಾಯಕನ ಪಾತ್ರವೇನೂ ಅನ್ನೋದನ್ನು ತಿಳಿಸಿಕೊಟ್ಟಿದ್ದು ಅವರ ಹೆಗ್ಗಳಿಕೆ.

ಸದಾ ನಗುತ್ತಾ, ಆತ್ಮೀಯವಾಗಿ ಇರೋ ಇವರನ್ನು ದೂರಮಾಡೋದು ಯಾರಿಗೂ ಕಷ್ಟ. ಎಲ್ಲರೂ ಆತ್ಮೀಯರೆ. ಇವರ ವೃತ್ತಿಬದುಕಿನಲ್ಲಿ ನೆರವಾದ ಹಿರಿಯರು ಅದೆಷ್ಟೋ ಜನ. ಕೋದಂಡಪಾಣಿ, ಎಂ.ಎಸ್. ವಿಶ್ವನಾಥನ್, ಇಳೆಯರಾಜ, ರೆಹಮಾನ್, ಎಂಜಿಆರ್ ಹೀಗೆ ನೂರಾರು ಜನ. ಒಮ್ಮೆ ಎಂಜಿಆರ್ ಅವರ ‘ಅಡಿಮೈ ಪೆಣ್’ ಚಿತ್ರದ ‘ಆಯಿರಂ ನಿಲವೇ ವಾ’ ಹಾಡಿನ ಪ್ರಾಕ್ಟೀಸ್ ಮುಗಿದಿತ್ತು. ರಾಜಸ್ಥಾನದಲ್ಲಿ ಚಿತ್ರೀಕರಣ ಪ್ರಾರಂಭವಾಗಬೇಕಿತ್ತು. ಎಸ್‌ಪಿಬಿ ಟೈಫಾಯಿಡ್ ಬಂದು ಮಲಗಿಬಿಟ್ಟರು. ಎಂಜಿಆರ್ ಒಂದು ತಿಂಗಳು ಚಿತ್ರೀಕರಣ ಮುಂದೂಡಿದರು. ಚಿತ್ರೀಕರಣ ಮುಗಿದ ಮೇಲೆ ಕುತೂಹಲ ತಡೆಯಲಾಗದೆ, ‘ಎಂಜಿಆರ್ ಸರ್ ನೀವು ಬೇರೆಯವರನ್ನು ಹಾಕಿಕೊಂಡು ಚಿತ್ರೀಕರಣ ಮುಗಿಸದೆ ನನಗಾಗಿ ಏಕೆ ಕಾದಿರಿ,’ ಎಂದು ಕೇಳುತ್ತಾರೆ. ‘ಇಲ್ಲ. ಹಾಗೆ ಮಾಡಿದ್ದರೆ ಉಳಿದವರು ನೀನು ಹಾಡಿದ್ದು ನನಗೆ ಇಷ್ಟವಾಗಿಲ್ಲ. ಅದಕ್ಕೇ ನಾನು ಬೇರೆಯವರ ಕೈಲಿ ಹಾಡಿಸಿದೆ ಎನ್ನಬಹುದು. ಅಂತಹ ಒಂದು ಮಾತು ಬಂದರೆ ನಿನ್ನ ಇಡೀ ಕೆರಿಯರ್ ಹಾಳಾಗಿಬಿಡುತ್ತಲ್ಲಾ ಎಂದು ಒಂದು ತಿಂಗಳು ಕಾದೆ’ ಎಂದು ಹೇಳಿದರು. ಆಗ ಬಾಲು ಅವರಿಗೆ ಅನ್ನಿಸಿದ್ದು: ‘ಅವರ ದೊಡ್ಡತನದ ಮುಂದೆ ನಾನೆಷ್ಟರವನು.’

ಇದು ನಮ್ಮ ಎಸ್‌ಪಿಬಿ. ವರ್ಷಕ್ಕೆ 365 ದಿನ, ದಿನಕ್ಕೆ 15 ಗಂಟೆ ನಿರಂತರವಾಗಿ, ಸಂತೋಷದಿಂದ ಹಾಡಿದ್ದಾರೆ. ಹಾಡನ್ನು ಹೃದಯಕ್ಕೆ ತಂದುಕೊಂಡು ಸಂತೋಷದಿಂದ ಹಾಡಿದ್ದಾರೆ. ಎಲ್ಲರೊಂದಿಗೂ ತಮ್ಮ ನೆನಪುಗಳನ್ನು ಹಂಚಿಕೊಳ್ಳುತ್ತಿದ್ದರು. ಅಂತಹವರಿಗೆ ಇಂದಿನ ಸಿಂಥಸೈಸರ್ ಯುಗದ ತಾಂತ್ರಿಕ ಬದುಕಿನ ಜೀವನ ಸಂಕಟದ್ದಾಗಿರಬಹುದು. ಸ್ವಲ್ಪ ಅಪಶ್ರುತಿ ಬಂದರೂ ಮತ್ತೆ ಮೊದಲಿನಿಂದ ಹಾಡಿ ಸರಿಪಡಿಸುತ್ತಿದ್ದ ಜೀವಕ್ಕೆ, ಈಗ ಯಾರಾದರೂ ಗಾಯಕರು ಟೆಕ್ನಿಷಿಯನ್ನಿಗೆ, ‘ಮೆಲೋಡೈಸ್ ಬಳಸಿ ಅದನ್ನು ಸರಿಮಾಡಿಬಿಡಿ’ ಅಂತ ಹೇಳಿದಾಗ ಕಷ್ಟವಾಗಬಹುದು. ತಾಂತ್ರಿಕತೆಯನ್ನು ಎಷ್ಟು ಬಳಸಿಕೊಳ್ಳಬೇಕು ಅನ್ನುವ ವಿವೇಕವಿರಬೇಕು ಅಂತ ನಂಬಿದವರು ಅವರು. ಜೊತೆಯಲ್ಲಿ ಕೆಲಸ ಮಾಡಿದ್ದ ಎಷ್ಟೋ ಜನ ಲೈವ್‌ವಾದಕರು ಯಂತ್ರಗಳಿಂದಾಗಿ ಕೆಲಸ ಕಳೆದುಕೊಂಡಿರುವುದಕ್ಕೆ ಮಿಡಿದ ಮನಸ್ಸು ಅವರದು. ಹಾಗಾಗಿಯೇ ಬಾಲ್ಯದಲ್ಲಿ ಸಂಗೀತದ ಕ್ಯಾಸೆಟ್ಟನ್ನು ಕೇಳಿಸುತ್ತಿದ್ದ ಅಂಗಡಿಯವರೊಡನೆ ಇಂದು ಹೋಗಿ, ಸಂತೋಷವಾಗಿ ಟೀ ಹೀರಲು ಅವರಿಗೆ ಸಾಧ್ಯವಾಗುತ್ತಿತ್ತು. ರಸ್ತೆ ಬದಿಯ ಚಮ್ಮಾರನಿಂದ ನಾಲ್ಕಾಣೆ ಪಡೆದು, ಟೀ ಕುಡಿದದ್ದು ಅಷ್ಟೇ ಹಸುರಾಗಿದೆ. ಅವರೊಂದಿಗೆ ಅಷ್ಟೇ ಮಧುರವಾದ ಬಾಂಧವ್ಯವೂ ಸಾಧ್ಯವಾಗಿದೆ.

‘ಆಯರ್ಪ್ಪಾಡಿ ಮಾಳಿಗೆಯಿಲ್ ತಾಯ್‌ಮಡಿಲಿಲ್’ ಎಂದು ಕೃಷ್ಣನಿಗೆ ಜೋಗುಳ ಹಾಡಿದ, ‘ಪವಡಿಸು ಪರಮಾತ್ಮ’ ಎಂದು ಶ್ರೀ ವೆಂಕಟೇಶನನ್ನು ಮಲಗಿಸಿದ ಎಸ್‌ಪಿಬಿ ಇಂದು ಸ್ವತಃ ಆ ಜೋಗುಳವನ್ನು ಆಲಿಸುತ್ತಾ ಚಿರನಿದ್ರೆಯಲ್ಲಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in